ಹಣವನ್ನು ಮುಜರಾಯಿ ಇಲಾಖೆಗೆ ಕೊಡಬೇಕು. ಏಕೆಂದರೆ ಪರಿಶಿಷ್ಟ ವರ್ಗ ಮತ್ತು ಪಂಗಡದವರಿಗೆ ಬಡವರಿಗೆ ಮೊದಲೇ ಮೂಢನಂಬಿಕೆ ಜಾಸ್ತಿ ಇದೆ. ಸಾಮಾನ್ಯವಾಗಿ ಯಾವುದೇ ಹಳ್ಳಿಗೆ ಹೋದರೂ ಸಹಿತ ಸಾರ್ವಜನಿಕ ಕೆಲಸಗಳಿಗಾಗಿ ಹಣವನ್ನು ಕೇಳುವುದನ್ನು ಬಿಟ್ಟು ಬಿಡುತ್ತಾರೆ, ದೇವಾಲಯಗಳನ್ನು ಕಟ್ಟಲಿಕ್ಕೆ ರಿಪೇರಿ ಮಾಡಲಿಕ್ಕೆ 10-20, 25-30 ಸಾವಿರ ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಾರೆ. ಪ್ರತಿ ಹಳ್ಳಿಯಲ್ಲೂ ಇದೇ ಸಮಸ್ಯೆಯಾಗಿರುವುದರಿಂದ ದಯಮಾಡಿ ಈ ಯೋಜನೆಯನ್ನು ನಮ್ಮ ಸರ್ಕಾರ ರದ್ದುಪಡಿಸಬೇಕು, ಮತ್ತು ಆ ಹಣವನ್ನು ಮುಜರಾಯಿ ಸಂಸ್ಥೆಗೆ ಕೊಡಬೇಕು.

ಶ್ರೀ ರಮೇಶ್ ಸಿ.ಜಿಗಜಿಣಗಿ:- ಇದರ ಬಗ್ಗೆ ಪರಿಶೀಲಿಸುತ್ತೇನೆ.

ಅಧ್ಯಕ್ಷರು:- ನಮ್ಮ ಆಸೆ ಏನು ಅಂದರೆ ಹೆಚ್ಚು ಹೆಚ್ಚು ಕುಮಾರಸ್ವಾಮಿಗಳಂತಹವರು ಬರಬೇಕು. ನಿಮ್ಮ ರೀತಿಯಲ್ಲಿ ಯೋಚನೆ ಮಾಡುವಂತಹ ಜನ ಬರಬೇಕು.

ವಿಷಯ: ಪುತ್ತೂರು ಡಿಪೋದಲ್ಲಿ ಕೆ.ಎಸ್.ಆರ್.ಟಿ.ಸಿ.ಬಸ್ಸುಗಳು.

407 (4053)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ಡಿಪೋದಲ್ಲಿ ಈಗ ಒಟ್ಟು ಇರುವ ಬಸ್ಸುಗಳು ಎಷ್ಟು? ಇದರಲ್ಲಿ ಸಂಚಾರ ಯೋಗ್ಯ ಬಸ್ಸುಗಳು ಎಷ್ಟು? ರಿಪೇರಿಯಲ್ಲಿರುವ ಬಸ್ಸುಗಳು ಎಷ್ಟು?

ಆ) ಕಳೆದ (3) ಮೂರು ವರ್ಷದಲ್ಲಿ ಪುತ್ತೂರು ಡಿಪೋಗೆ ಬಂದ ಹೊಸ ಬಸ್ಸುಗಳು ಎಷ್ಟು. ಎಷ್ಟು ಹೆಚ್ಚಿನ ಬಸ್ಸುಗಳ ಅವಶ್ಯಕತೆ ಇದೆ?

ಇ) ಪುತ್ತೂರು ಡಿಪೋದಲ್ಲಿ ಪ್ರಸ್ತುತ ಖಾಲಿ ಇರುವ ಡ್ರೈವರ್, ಕಂಡಕ್ಟರ್ ಹಾಗೂ ಮೆಕ್ಯಾನಿಕ್‌ಗಳ ಹುದ್ದೆ ಎಷ್ಟು? ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):

ಅ) ಪುತ್ತೂರು ಘಟಕದಲ್ಲಿ 105 ವಾಹನ ಬಲ ಹೊಂದಿದ್ದು, ಇವುಗಳಲ್ಲಿ 2 ವಾಹನಗಳು ಲಘು ದುರಸ್ತಿಗಾಗಿ ಘಟಕದಲ್ಲಿ ನಿಂತಿದೆ. 2 ವಾಹನಗಳು ಅರ್ಹತಾ ನೋಂದಣಿಗಾಗಿ ವಿಭಾಗ ಕಾರ್ಯಾಗಾರದಲ್ಲಿ ನಿಂತಿವೆ.

ಆ) ಪುತ್ತೂರು ಘಟಕಕ್ಕೆ ಒಂದಿನ 3 ವರ್ಷಗಳಿಂದ ನೀಡಿರುವ ವಾಹನಗಳ ವಿವರ ಈ ಕೆಳಕಂಡಂತಿವೆ:-

ವಾಹನಗಳ ನೀಡಿಕೆ	94-95	95-96	96-97	97-98 31-7-97ರವರೆಗೆ
ಸುಪಿಹಾರಿ ಲಿರೆ	2	-	-	-
ಸುಪಹಾರಿ	1	5	2	-
ಪುಷ್ಪಕ್	-	-	1	-
ಸಾಮಾನ್ಯ	-	6	11	4
ಒಟ್ಟು	3	11	14	4

ಪ್ರಸ್ತುತವಾಗಿ ಹೊಸ ಅನುಸೂಚಿಯ ಕಾರ್ಯಾಚರಣೆಗೆ ಈ ಘಟಕವು 107 ವಾಹನ ಬಲದ ಅವಶ್ಯಕತೆಯಿದೆ. ಪ್ರಸ್ತುತವಾಗಿ 2 ವಾಹನಗಳ ಕೊರತೆಯಿದೆ. ಈ ಕೊರತೆ ನೀಗಿಸಿದರೆ ಸುಗಮವಾಗುವುದು. 1997-98ನೇಯೋಜನೆ ಪ್ರಕಾರ 35 ವಾಹನಗಳನ್ನು ಬದಲಿ ವ್ಯವಸ್ಥೆಗಾಗಿ ನೀಡಲಾಗುವುದು.

ಇ) ಮಂಗಳೂರು ವಿಭಾಗದ ಪುತ್ತೂರು ಘಟಕದಲ್ಲಿ ಚಾಲಕ ನಿರ್ವಾಹಕ, ತಾಂತ್ರಿಕ ಸಿಬ್ಬಂದಿಯಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಗಿನಂತಿದೆ:-

	ಚಾಲಕರು	:	18
	ನಿರ್ವಾಹಕರು	:	ಇಲ್ಲ
	ತಾಂತ್ರಿಕ	: **ಬಡ್ತಿ**	**ನೇರ ನೇಮಕಾತಿ**
1)	ಸಹಾಯಕ ಕಾರ್ಯ ಅಧೀಕ್ಷಕರು.	1	-
2)	ಪಾರುಪತ್ತೇಗಾರ	-	1
3)	ಮುಖ್ಯ ಕುಶಲಕರ್ಮಿ	-	-
4)	ಕುಶಲಕರ್ಮಿ	-	23
5)	ಸಹಾಯಕ ಕುಶಲಕರ್ಮಿ	9	-
6)	ಸಹಾಯಕ-ಎ	11	-

7)	ಸಹಾಯಕ-ಬಿ	-	-
	ಒಟ್ಟು	**21**	**24**

ಪುತ್ತೂರು ಘಟಕವು ಮಂಗಳೂರು ವಿಭಾಗದ ವಿಡಲಿತ ವ್ಯಾಪ್ತಿಯಲ್ಲಿದ್ದು ಮಂಗಳೂರು ವಿಭಾಗಕ್ಕೆ 35 ಪರಿಶಿಷ್ಟ ಜಾತಿ:ಪಂಗಡದ ಚಾಲಕರ ನೇಮಕಾತಿ ಮಾಡಿ ಹಿಂಬಾಕಿಯನ್ನು ತುಂಬಿಕೊಳ್ಳಲು ಅನುಮತಿ ನೀಡಲಾಗಿದೆ. ಆದರೆ, ಸಂಬಂಧಪಟ್ಟ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಿಂದ ಅರ್ಹ ಪರಿಶಿಷ್ಟ ಜಾತಿ:ಪಗಂಡದ ಅಭ್ಯರ್ಥಿಗಳ ಯಾದಿಗಳು ಲಭ್ಯವಿಲ್ಲದ ಕಾರಣ ಮಂಗಳೂರು ವಿಭಾಗವು ಕೇವಲ 10 ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡಿರುತ್ತದೆ. ಆದಾಗ್ಯೂ ಮುಕ್ತ ಜಾಹೀರಾತಿಗೆ ಅವಕಾಶವಿರುವುದರಿಂದ ತುಂಬಲಾಗದಿರುವ 25 ಚಾಲಕ ಹುದ್ದೆಗಳನ್ನು ಪರಿಶಿಷ್ಟ ಜಾತಿ:ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಂದ ತುಂಬಲು ಮುಕ್ತ ಜಾಹೀರಾತನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗಿದೆ. ಹಾಗೆಯೇ 23 ಕುಶಲಕರ್ಮಿ ಹುದ್ದೆಗಳನ್ನು ತುಂಬಲು ಸಂಬಂಧಪಟ್ಟ ಉದ್ಯೋಗವಿನಿಮಯ ಕೇಂದ್ರಗಳಿಂದ ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು ಪಡೆದಿದ್ದು, ನೇಮಕಾತಿ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ. ದಿನಾಂಕ:6-6-97ರಲ್ಲಿ ಪಾಡುಪತ್ತೆಗಾರ ಮತ್ತು ಮೆಕ್ಯಾನಿಕ್ ಹುದ್ದೆಗಳನ್ನು ತುಂಬಲು ಜಾಹಿರಾತು ಹೊರಡಿಸಿದ್ದು ಅರ್ಜಿಗಳನ್ನು ಪಡೆಯಲಾಗಿದೆ. ಹಾಗೂ ನೇಮಕಾತಿ ಕ್ರಮ ಪ್ರಗತಿಯಲ್ಲಿದೆ.

ಶ್ರೀ ಡಿ.ವಿ.ಸದಾನಂದಗೌಡ:- ಇನ್ನು ಎರೆಡು ಮೂರು ಪ್ರಶ್ನೆಗಳನ್ನು ನಾನು ಇದರ ಬಗ್ಗೆ ಕೇಳಬಯಸುತ್ತೇನೆ. ಅವರು ಕೊಟ್ಟ ಮಾಹಿತಿ ಚೆನ್ನಾಗಿದೆ ಮತ್ತು ಸಾರಿಗೆ ಮಂತ್ರಿಗಳು ಉತ್ತಮವಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ ಅದಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಡಿಪೋದಲ್ಲಿ 105 ಬಸ್ಸುಗಳು ಇವೆ. ಆದರೂ ಸಹಿತ ಸುಮಾರು 25 ಚಾಲಕರ ಹುದ್ದೆಗಳು ಖಾಲಿ ಇವೆ. ಬಸ್ಸುಗಳಿದ್ದು ಚಾಲಕರು ಇಲ್ಲದಿದ್ದರೆ ಬಸ್ಸಿನ ಚಾಲನೆ ಸಾಧ್ಯ ಇದೆಯೇ? ಇದು ಕೇವಲ ಒಂದು ಡಿಪೋ ಸಮಸ್ಯೆ ಅಲ್ಲ. ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ-ಕಡೆ ಬೇಕಾದಷ್ಟು ಬಸ್ಸುಗಳಿದ್ದಾಗ್ಯೂ ಅಲ್ಲಿ ಚಾಲಕರ ಹುದ್ದೆ ಇಲ್ಲದ ಕಾರಣ, ಬಸ್ಸುಗಳ ಓಡಾಟ ಇರುವುದಿಲ್ಲ. ಬಸ್ಸು ಇದೆ ಎಂದು ನೀವು ಹೇಳುತ್ತೀರಿ, ಬಸ್ಸಿದ್ದು, ಅಲ್ಲಿ ಚಾಲಕರು ಇರದಿದ್ದರೆ, ಆ ಬಸ್ಸುಗಳ ಓಡಾಟ ಮಾಡಲಿಕ್ಕೆ ಬೇರೆ ವ್ಯವಸ್ಥೆ ಏನು ಇದೆ? ಎರಡನೆಯದಾಗಿ ಈ ಒಂದು ರಾಜ್ಯವ್ಯಾಪ್ತಿಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಯಾದಂತಹ ಡ್ರೈವರ್‌ಗಳನ್ನು ಫಿಲಪ್ ಮಾಡಲಿಕ್ಕೆ ಅಯಾಯ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬೇಕಾದಂಥ ವ್ಯವಸ್ಥೆಗಳು ಇಲ್ಲವ ಕಾರಣ ಅಂದರೆ ಜನ ಇಲ್ಲದ ಕಾರಣ ಅದು ಖಾಲಿ ಇವೆ, ಇದಕ್ಕೆ ಏನಾದರೂ ತಾತ್ಕಾಲಿಕವಾಗಿ ಬೇರೆ ಡ್ರೈವರ್‌ಗಳನ್ನು ರಾಜ್ಯದಾದ್ಯಂತ ನೇಮಿಸಲು, ಅವರನ್ನು ಖಾಯಂ ನೇಮಕ ಮಾಡುವವರೆಗೆ ಏನಾದರೂ ಬದಲಿ ವ್ಯವಸ್ಥೆ

ಮಾಡಲಿಕ್ಕೆ ಸಾಧ್ಯವಿದೆಯೆ? ಇಲ್ಲದಿದ್ದರೆ ಏನಾಗುತ್ತದೆ ಎಂದರೆ ನಮ್ಮಲ್ಲಿ 105 ಬಸ್ಸುಗಳಿವೆ, ಆದರೆ 25 ಜನ ಡ್ರೈವರ್ಸ್ ಇಲ್ಲ ಆಗ 80 ಬಸ್ಸುಗಳು ಮಾತ್ರ ಓಡುತ್ತವೆ, ಬಾಕಿ 25 ರೂಟ್‌ಗಳಲ್ಲಿ ಬಸ್ ಓಡಾಟ ಮಾಡದಂಥ ಪರಿಸ್ಥಿತಿ ಇದೆ. ಆಗ ಏನು ಮಾಡುತ್ತಾರೆ ಎಂದರೆ ಹಳ್ಳಿಯ ಬಸ್ಸುಗಳನ್ನು ನಿಲ್ಲಿಸುತ್ತಾರೆ. ಇದಕ್ಕೆ ಏನು ಪರ್ಯಾಯ ವ್ಯವಸ್ಥೆಯನ್ನು ಕಂಡು ಕೊಂಡಿದ್ದೀರಿ?

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಸನ್ಮಾನ್ಯ ಸದಸ್ಯರು ಎರಡು ಮೂರು ಉಪಪ್ರಶ್ನೆಗಳನ್ನು ಎತ್ತಿದ್ದಾರೆ. 36 ಹೊಸ ಬಸ್ಸುಗಳನ್ನು ಪುತ್ತೂರು ಡೀಪೊಗೆ ಹಾಕಿದ್ದೇವೆ. 1997-98ನೇ ಯೋಜನೆಯ ಪ್ರಕಾರವಾಗಿ ಈ 36 ಬಸ್ಸುಗಳನ್ನು ಕೊಟ್ಟಿದ್ದೇವೆ. ಕಾರಣ ಏನು ಅಂದರೆ ನಿಮ್ಮಲ್ಲಿರತಕ್ಕ ಬಸ್ಸುಗಳು ಬಹಳ ಹಳೆಯದಾಗಿವೆ ಮತ್ತು ಬಹಳ ವರ್ಷಗಳಾಗಿವೆ ಎನ್ನುವ ಉದ್ದೇಶದಿಂದ ಈ ಎರಡು ಜಿಲ್ಲೆಗಳಲ್ಲಿ ಅಂದರೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದಲ್ಲಿ ಪರಿಶಿಷ್ಟ ವರ್ಗ ಮತ್ತು ಜನಾಂಗಕ್ಕೆ ಸೇರಿರತಕ್ಕ, ಟ್ರೈನಿಂಗ್ ಮತ್ತು ವಾಹನ ಚಾಲನೆ ಮಾಡಲಿಕ್ಕೆ ಲೈಸೆನ್ಸ್ ಹೊಂದಿರತಕ್ಕ ಮತ್ತು ಮೂರು ವರ್ಷಗಳ ಅನುಭವ ಇರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಡ್ರೈವರ್‌ಗಳು ಇಲ್ಲ. ಅದಕೋಸ್ಕರ ನಾವೇ ಸ್ವತಃ ಸಾರಿಗೆ ಸಂಸ್ಥೆವತಿಯಿಂದ ಆರು ಡ್ರೈವಿಂಗ್ ಟ್ರೈನಿಂಗ್ ಸ್ಕೂಲ್ ಪ್ರಾರಂಭ ಮಾಡಿದ್ದೇವೆ. ಇಲ್ಲಿ ನಾವು ಪರಿಶಿಷ್ಟ ಜಾತಿ ಮತ್ತು ಪಂಗಡದ ಯುವಕರನ್ನು ಆಯ್ಕೆ ಮಾಡಿಕೊಂಡು ತರಬೇತಿ ಕೊಟ್ಟು ಅವರಿಗೆ ಈ ಎರಡು ಜಿಲ್ಲೆಗಳಿಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ, ಮತ್ತು ತಾತ್ಕಾಲಿಕವಾಗಿ ಬೇರೆ ಜಿಲ್ಲೆಗಳಿಂದ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬಲು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ತಮ್ಮ ಜಿಲ್ಲೆಗೂ ಸಹಿತ ಇದನ್ನು ಮಾಡುತ್ತೇವೆ. ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ. ಅದಕ್ಕೋಸ್ಕರ ಈ ಮೂರೇ ತಿಂಗಳಲ್ಲಿ ನಾವು ಯಾವುದೇ ಡಿಸ್‌ಕ್ರಿಷನರಿ ಮಾರ್ಕ್ಸ್ ಇಟ್ಟುಕೊಂಡಿಲ್ಲ. ಯಾವುದೇ ಸೆಲೆಕ್ಷನ್ ಕಮಿಟಿಯನ್ನು ಮಾಡಿಲ್ಲ. 2104 ಕಂಡಕ್ಟರ್‌ಗಳು, 2,683 ಡ್ರೈವರ್‌ಗಳು, 1525 ಹೆಲ್ಪರ್‌ಗಳು, 42 ಜನ ಆರ್ಟಿಸ್‌ನ್‌ಗಳು, 6 ಮಂದಿ ಅಸಿಸ್ಟೆಂಟ್ ಆರ್ಟಿಸಾನ್‌ಗಳು 126 ಮಂದಿ ಆಫೀಸರ್‌ಗಳು ಒಟ್ಟು 6,886 ಹುದ್ದೆಗಳನ್ನು ಈಗಾಗಲೇ ನೇಮಕ ಮಾಡಿದ್ದೇವೆ. ಇದರ ಬಗ್ಗೆ ಪಾರದರ್ಶಕವಾಗಿ ಮೆರಿಟ್, ರೋಸ್ಟರ್ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹಿಂದಿನ ಸರ್ಕಾರದಲ್ಲೇ ಮಾಡುತ್ತೇವೆ ಎಂದು ಹೇಳಿದ್ದರು, ಆದರೆ ಕೆಎಸ್‌ಆರ್‌ಟಿಸಿ ಕಾರ್ಯಾಚರಣೆಯಲ್ಲಿ ಜಾರಿಗೆ ಬಂದಿರಲಿಲ್ಲ ಅದನ್ನು ಸಹಿತ ಮಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ 10 ಪರ್ಸೆಂಟ್ ಅಂಕಗಳನ್ನು ಕೊಟ್ಟು ಸೆಲೆಕ್ಷನ್ ಮಾಡಿದ್ದೇವೆ. ಇನ್ನು ಎರಡು ಮೂರು ತಿಂಗಳಲ್ಲಿ ಇಲ್ಲಿನ ಪರಿಸ್ಥಿತಿ ಸುಧಾರಣೆ ಆಗುತ್ತದೆ ಎನ್ನುವ ಭಾವನೆ ನನ್ನದಾಗಿದೆ ಸ್ವಾಮಿ.

ಶ್ರೀ ಡಿ.ವಿ.ಸದಾನಂದಗೌಡ:- ಈ ವರ್ಷ ಹೊಸದಾಗಿ 36 ಹೊಸ ಬಸ್ಸುಗಳನ್ನು ಹಾಕಿದ್ದೇವೆಂದು ತಾವು ಈಗ ಹೇಳಿದ್ದೀರಿ, ಇನ್ನು 125 ಬಸ್ಸು ಅಲ್ಲಿದೆ ಕಳೆದ ಬಾರಿ ತಮ್ಮ ಕಛೇರಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ಮೀಟಿಂಗ್ ಕರೆದಿದ್ದಿರಿ, ಆ ಮೀಟಿಂಗ್‌ನಲ್ಲಿ

ಸುಮಾರು 15 ಹೆಚ್ಚುವರಿ ರೂಟ್‌ಗಳು ನಮ್ಮ ಪೂತ್ತೂರಿನ ವ್ಯಾಪ್ತಿಯಲ್ಲಿ ಬರುತ್ತವೆ ಎಂದು ತಾವು ತಮ್ಮ ನೋಟ್‌ನಲ್ಲಿ ಕೊಟ್ಟಿದ್ದೀರಿ, ನೀವು ಈ ಹೆಚ್ಚುವರಿ ರೂಟ್‌ಗಳ ಬಗ್ಗೆಯೂ ಸಹಿತ ತಮ್ಮ ಗಮನವನ್ನು ಹರಿಸುತ್ತೀರಾ? ಹೆಚ್ಚುವರಿ ರೂಟ್‌ಗಳನ್ನು ಅಪ್ರೂವ್ ಮಾಡಿ ಬಸ್ಸನ್ನು ನಡೆಸುವಂಥ ಕೆಲಸವನ್ನು ಮಾಡುತ್ತೀರಾ?

11.40 ಎ.ಎಂ

ಶ್ರೀ ಪಿ.ಜಿ.ಆರ್.ಸಿಂಧ್ಯ: ಅದಕ್ಕೋಸ್ಕರವಾಗಿ ರೂಟುಗಳನ್ನು ಹೆಚ್ಚುಮಾಡುವುದು, ಇದನ್ನು ಡೀವಿಯೇಟ್ ಮಾಡುವುದು ಎಂದು ಮಾಡಿ, ಇದನ್ನು ತಿಳಿದುಕೊಳ್ಳಲು ಡಿಪೋಗಳ ಹಂತದಲ್ಲಿ ಶಾಸಕರು ಅಧ್ಯಕ್ಷರಾಗಿರತಕ್ಕಂಥ ಒಂದು ಸಮಿತಿಯನ್ನು ಮಾಡಿದ್ದೇವೆ. ಇದು ಸ್ಥಳೀಯವಾಗಿರತಕ್ಕಂಥ ಸಂಸ್ಥೆ ಗೌರವಾನ್ವಿತ ಶಾಸಕರುಗಳು ಅವರವರ ಕ್ಷೇತ್ರಗಳಲ್ಲಿ ಬರತಕ್ಕಂಥ ಡಿಪೋ ಸಲಹಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಅದನ್ನು ಇನ್ನೂ ರಚನೆ ಮಾಡಿಲ್ಲ. ಸದ್ಯದಲ್ಲೇ ಮಾಡುತ್ತಿದ್ದೇವೆ. ತಾವೇ ಕುಳಿತು ಅದರ ಬಗ್ಗೆ ಸಲಹೆಗಳನ್ನು ಕೊಡಬೇಕು.

ಡಾ: ಎಂ.ಪಿ.ಕರ್ಕಿ: ಸಾರಿಗೆ ಸಚಿವರು ನಮ್ಮ ಜಿಲ್ಲೆಗೆ ಬಂದಾಗ ನಾನು ಅವರ ಗಮನಕ್ಕೆ ಒಂದು ವಿಷಯವನ್ನು ತಂದಿದ್ದೆ. ನಮ್ಮ ಜಿಲ್ಲೆಯಲ್ಲಿ ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜನಾಂಗದ ಜನ ಕೇವಲ ಶೇಕಡ 5 ರಷ್ಟು ಮಾತ್ರ ಇದ್ದಾರೆ. ಆದ್ದರಿಂದ ಅಲ್ಲಿಂದ ರೆಕ್ರೂಟ್‌ಮೆಂಟ್ ಮಾಡಿ ಅವರಿಗೆ ತರಬೇತಿ ಕೊಡತಕ್ಕಂಥ ವ್ಯವಸ್ಥೆ ಆಗತಕ್ಕಂಥಾದ್ದು ಸಾಧ್ಯವಿಲ್ಲ. ಅದಕ್ಕಾಗಿ ಆ ಜಾಗವನ್ನು ತುಂಬಲು ಪರ್ಯಾಯವಾಗಿ ಬೇರೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಂಡಿದ್ದೇನೆ. ಅದನ್ನು ಒಪ್ಪುತ್ತಾರೆಯೇ ಎನ್ನುವಂಥ ಮಾತನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಮಾನ್ಯ ಗೌರವಾನ್ವಿತ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿರತಕ್ಕಂಥ, ತರಬೇತಿ ಹೊಂದಿರತಕ್ಕಂಥ ಅವಧಿಯನ್ನು ಮೀರಿರತಕ್ಕಂಥ ಪಾಹನ ಚಾಲಕರು ಸಿಗದೇ ಇರುವುದರಿಂದಾಗಿ, ನಾವೇ ನಾವೇ ಅವರನ್ನು ನೇರವಾಗಿ ಬೇರೆ ಕಡೆಗಳಿಂದ ನೇಮಕ ಮಾಡಿಕೊಂಡು, ತರಬೇತಿ ಕೇಂದ್ರಗಳಲ್ಲಿ ತರಬೇತಿಯನ್ನು ಕೊಟ್ಟು ಆ ಜಾಗಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದರ ಜೊತೆಗೆ ಬದಲಿ ವ್ಯವಸ್ಥೆ ಮಾಡಲು ಬೇರೆ ಡಿವಿಷನ್‌ಗಳಿಂದ ಡ್ರೈವರ್‌ಗಳನ್ನು ಕಳುಹಿಸಲು ಕ್ರಮವನ್ನು ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.